# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 89 (112)

ಸದಸ್ಯರ ಹೆಸರು : ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ಸಚಿವರು : ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 27.01.2026

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ ತೋಟಗಾರಿಕಾ ಬೆಳೆಯ ಕೃಷಿಕರಿಗೆ ವಿಮಾ ಪರಿಹಾರ ನೀಡಲು ಅನುಸರಿಸುವ ಮಾನದಂಡಗಳಾವುವು; | ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ ತೋಟಗಾರಿಕಾ ಬೆಳೆಯ ಕೃಷಿಕರಿಗೆ ವಿಮಾ ಪರಿಹಾರ ನೀಡಲು ಅನುಸರಿಸುವ ಮಾನದಂಡಗಳು ಈ ಕೆಳಕಂಡಂತಿವೆ.<br><br>1. ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ ಒಟ್ಟು ವಿಮಾ ಮೊತ್ತ (Sum Insured) ವನ್ನು Scale of Finance ಆಧಾರದ ಮೇರೆಗೆ SLCCCI (State Level Coordination Committee on Crop Insurance) ಯ ಅನುಮೋದನೆಯೊಂದಿಗೆ ನಿಗಧಿಪಡಿಸಲಾಗುತ್ತದೆ.<br><br>2. ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ ವಿವಿಧ ವಿಮಾ ಘಟಕಗಳಲ್ಲಿ ಬೆಳೆಗಳನ್ನು ಅಧಿಸೂಚಿಸಲಾಗುತ್ತದೆ.<br><br>3. ಅಧಿಸೂಚಿಸಲಾಗುವ ಬೆಳೆಗಳಿಗೆ ಆಯಾ ವಿಮಾ ಘಟಕ/ ಗ್ರಾಮ ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ತಾಲ್ಲೂಕುವಾತು / ಹೋಬಳಿವಾರು ಟರ್ಮ್ ಶೀಟ್ ಗಳನ್ನು ಸಿದ್ಧಗೊಳಿಸಲಾಗಿರುತ್ತದೆ.<br><br>4. ವಿವಿಧ ವಿಮಾ ಘಟಕಗಳಲ್ಲಿ ಅಧಿಸೂಚಿಸಲಾದ ಬೆಳೆಗಳಿಗೆ ಆಯಾ ವಿಮಾ ಘಟಕ/ ಗ್ರಾಮ ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ದಾಖಲಾದ ಹವಾಮಾನ ಸೂಚ್ಯಂಕಗಳ ಆಧಾರದ ಮೇರಿಗೆ ಸಂಭವಿಸಬಹುದಾದ ಬೆಳೆ ನಷ್ಟವನ್ನು ಟರ್ಮ್ ಶೀಟ್ ಗಳ ಪ್ರಕಾರ ಅಂದಾಜಿಸಲಾಗುತ್ತದೆ ಹಾಗೂ ಅದರಂತೆ ಋತುವಾರು ನೋಂದಾಯಿಸಲ್ಪಟ್ಟ ರೈತರಿಗೆ ವಿಮಾ ಪರಿಹಾರ ಮೊತ್ತವನ್ನು ವಿಮಾ ಸಂಸ್ಥೆವತಿಯಿಂದ ವಿತರಿಸಲಾಗುತ್ತದೆ. |

| | | |
|---|---|---|
| | | 5. ಆಯಾ ವಿಮಾ ಘಟಕ/ ಗ್ರಾಮ ಪಂಚಾಯಿತಿಯಲ್ಲಿ ಹವಾಮಾನ ಸೂಚ್ಯಂಕಗಳಂತೆ ಹಾಗೂ ಟರ್ಮ್ ಶೀಟ್ ಗಳಂತೆ ಬೆಳೆ ಪರಿಹಾರ ಲಭ್ಯವಾದಲ್ಲಿ ಸದರಿ ವಿಮಾ ಘಟಕ/ ಗ್ರಾಮ ಪಂಚಾಯಿತಿಯಲ್ಲಿ ನೋಂದಾಯಿಸಿರುವ ಎಲ್ಲಾ ರೈತರುಗಳಿಗೆ ಸಮಾನವಾಗಿ ನಷ್ಟ ಉಂಟಾಗಿದೆ ಎಂದು ಪರಿಗಣಿಸಿ ನೊಂದಾಯಿತ ವಿಸ್ತರಣೆಯ ಆಧಾರದ ಮೇರೆಗೆ ವಿಮಾ ಪರಿಹಾರ ಮೊತ್ತವನ್ನು ವಿಮಾ ಸಂಸ್ಥೆವತಿಯಿಂದ ವಿತರಿಸಲಾಗುತ್ತದೆ. |
| ಆ) | ಮಳೆ ಬಿದ್ದ ಪ್ರಮಾಣವನ್ನು ಮಾದಂಡವನ್ನಾಗಿ ಪರಿಗಣಿಸುವುದಾದರೆ ಸದರಿ ಮಾಪನ ಕೇಂದ್ರಗಳನ್ನು ಎಲ್ಲೆಲ್ಲಿ ಸ್ಥಾಪಿಸಲಾಗಿದೆ; ಅವುಗಳನ್ನು ನಿರ್ವಹಿಸುತ್ತಿರುವವರು ಯಾರು; ಕಳೆದ ಐದು ವರ್ಷಗಳಲ್ಲಿ ಅವುಗಳ ನಿರ್ವಹಣೆಗೆ ತಗುಲಿದ ವೆಚ್ಚವೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವು ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಮಳೆ ಮಾಪನ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಕೇಂದ್ರವು ಸಂಬಂಧಿಸಿದ ವೆಂಡರ್ ಸಂಸ್ಥೆಗಳ ಮುಖೇನ ಮಳೆ ಮಾಪನ ಕೇಂದ್ರಗಳ ಸ್ಥಾಪನೆ ಮತ್ತು ನಿರ್ವಹಣೆಯನ್ನು ನಿರ್ವಹಿಸಲಾಗುತ್ತಿದೆ.<br><br>ರಾಜ್ಯದಲ್ಲಿ ಒಟ್ಟಾರೆ ಸ್ಥಾಪಿಸಲಾದ ಮಳೆ ಮಾಪನ ಕೇಂದ್ರಗಳ ಪೈಕಿ ವಾರ್ಷಿಕ ನಿರ್ವಹಣೆಯಲ್ಲಿರುವ ಒಟ್ಟು 3936 ಕಾರ್ಯನಿರತ ಮಳೆ ಮಾಪನ ಕೇಂದ್ರಗಳ ನಿರ್ವಹಣೆಗೆ ಸಂಬಂಧಿಸಿದಂತೆ 2023 ಮತ್ತು 2024 ರಲ್ಲಿ ಒಟ್ಟು ರೂ.2.54ಕೋಟಿಗಳನ್ನು ವೆಚ್ಚ ಮಾಡಲಾಗಿದೆ. ದಿನಾಂಕ:22.01.2026 ರನ್ವಯ ಕಾರ್ಯ ನಿರತ ಮಳೆ ಮಾಪನ ಕೇಂದ್ರಗಳ ಜಿಲ್ಲಾವಾರು ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಇ) | 2024-25 ನೇ ಸಾಲಿನಲ್ಲಿ ರಾಜ್ಯದಲ್ಲಿ ಕೃಷಿಕರು ತೋಟಗಾರಿಕಾ ಬೆಳೆಗಳಿಗೆ ಹವಾಮಾನ ಆಧಾರಿತ ವಿಮಾ ಯೋಜನೆಗಳಿಗೆ ಪಾವತಿಸಿದ ಕಂತಿನ ಒಟ್ಟು ಮೊತ್ತವೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | 2024-25 ನೇ ಸಾಲಿನಲ್ಲಿ ರಾಜ್ಯದಲ್ಲಿ ಕೃಷಿಕರು ತೋಟಗಾರಿಕಾ ಬೆಳೆಗಳಿಗೆ ಹವಾಮಾನ ಆಧಾರಿತ ವಿಮಾ ಯೋಜನೆಗಳಿಗೆ ಪಾವತಿಸಿದ ಕಂತಿನ ಒಟ್ಟು ಮೊತ್ತ ರೂ. 17885.62 ಲಕ್ಷಗಳು.<br><br>ಜಿಲ್ಲಾವಾರು ಮಾಹಿತಿ ಅನುಬಂಧ-2ರಲ್ಲಿ ನೀಡಲಾಗಿದೆ. |
| ಈ) | 2024-25 ನೇ ಸಾಲಿನ ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದಂತೆ ಪಾವತಿಯಾದ ವಿಮಾ ಪರಿಹಾರದ ಮೊತ್ತವೆಷ್ಟು; ಪರಿಹಾರ ಪಡೆದ ಕೃಷಿಕರ ಸಂಖ್ಯೆ ಎಷ್ಟು; ಪಾವತಿಸಲು ಬಾಕಿ ಇರುವ ಕೃಷಿಕರ ಸಂಖ್ಯೆ ಎಷ್ಟು; ವಿಮಾ ಪರಿಹಾರ ಮೊತ್ತವೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | 2024-25 ನೇ ಸಾಲಿನ ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದಂತೆ ಈವರೆವಿಗೆ ಪಾವತಿಯಾದ ವಿಮಾ ಪರಿಹಾರದ ಮೊತ್ತ ರೂ.111595.45 ಲಕ್ಷ. ಪರಿಹಾರ ಪಡೆದ ಕೃಷಿಕರ ಸಂಖ್ಯೆ 5,55,100 ಪಾವತಿಸಲು ಬಾಕಿ ಇರುವ ಕೃಷಿಕರ ಸಂಖ್ಯೆ 194691 ವಿಮಾ ಪರಿಹಾರ ಮೊತ್ತ ರೂ.26512.52 ಲಕ್ಷ.<br><br>ಜಿಲ್ಲಾವಾರು ಮಾಹಿತಿ ಅನುಬಂಧ-2 ರಲ್ಲಿ ನೀಡಲಾಗಿದೆ. |

| | | |
|---|---|---|
| ಉ) | ಸದರಿ ಹವಮಾನಾಧಾರಿತ ಬೆಳೆ ವಿಮೆ ಯೋಜನೆಯ ಬಗ್ಗೆ ಕೃಷಿಕರ ದೂರುಗಳು/ ಕುಂದು ಕೊರತೆಗಳು ಇದ್ದಲ್ಲಿ ಪರಿಹರಿಸುವ ಪ್ರಾಧಿಕಾರ ಯಾವುದು; ಇತ್ತೀಚಿನ 3 ವರ್ಷಗಳಲಿ ಸದರಿ ಪ್ರಾಧಿಕಾರಕ್ಕೆ ಸಲ್ಲಿಕೆಯಾದ ದೂರುಗಳು ಎಷ್ಟು; ಪರಿಹಾರ ಕಂಡುಕೊಳ್ಳಲಾದ ದೂರುಗಳು ಎಷ್ಟು? ( ಜಿಲ್ಲಾವಾರು ಮಾಹಿತಿ ನೀಡುವುದು) | ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯ ಬಗ್ಗೆ ಕೃಷಿಕರ ದೂರುಗಳು/ ಕುಂದು ಕೊರತೆಗಳು ಇದ್ದಲ್ಲಿ ಪರಿಹರಿಸಲು ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರ್ ಅಧ್ಯಕ್ಷತೆ ಹಾಗೂ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ವಿವಿಧ ಇಲಾಖೆ/ವಿಮಾ ಪ್ರತಿನಿಧಿಗಳನ್ನೊಳಗೊಂಡಂತೆ ಪ್ರಾಧಿಕಾರವಿರುತ್ತದೆ.<br><br>ಸದರಿ ಪ್ರಾಧಿಕಾರಕ್ಕೆ ಸಲ್ಲಿಕೆಯಾದ ದೂರುಗಳು, ಪರಿಹಾರ ಕಂಡುಕೊಳ್ಳಲಾದ ದೂರುಗಳ ಜಿಲ್ಲಾವಾರು ಮಾಹಿತಿ ಅನುಬಂಧ-3 ರಲ್ಲಿ ನೀಡಲಾಗಿದೆ. |

**ಸಂಖ್ಯೆ: HORTI 30 HGM 2026**

**(ಎಸ್. ಎಸ್. ಮಲ್ಲಿಕಾರ್ಜುನ್)**
**ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು**

## ಅನುಬಂಧ – 1

| ದಿನಾಂಕ 22-01-2026 ಅನ್ವಯ ರಾಜ್ಯದಾದ್ಯಂತ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅಳವಡಿಸಲಾದ ಮಳೆ ಮಾಪನ ಕೇಂದ್ರಗಳ ಪೈಕಿ ವಾರ್ಷಿಕ ನಿರ್ವಹಣೆ (AMC) ಯಲ್ಲಿರುವ ಮಳೆ ಮಾಪನ ಕೇಂದ್ರಗಳ ಜಿಲ್ಲಾವಾರು ವಿವರ | | |
|---|---|---|
| **ಕ್ರ.ಸಂ** | **ಜಿಲ್ಲೆ** | **ದೂರಸ್ಥ ಮಳೆ ಮಾಪನ ಕೇಂದ್ರಗಳು (TRG's)** |
| 1 | ಬಾಗಲಕೋಟೆ | 140 |
| 2 | ಬಳ್ಳಾರಿ | 74 |
| 3 | ಬೆಳಗಾವಿ | 452 |
| 4 | ಬೆಂಗಳೂರು ಗ್ರಾಮಾಂತರ | 86 |
| 5 | ಬೆಂಗಳೂರು ನಗರ | 167 |
| 6 | ಬೀದರ್ | 132 |
| 7 | ಚಾಮರಾಜನಗರ | 103 |
| 8 | ಚಿಕ್ಕಬಳ್ಳಾಪುರ | 112 |
| 9 | ಚಿಕ್ಕಮಗಳೂರು | 178 |
| 10 | ಚಿತ್ರದುರ್ಗ | 126 |
| 11 | ದಕ್ಷಿಣ ಕನ್ನಡ | 203 |
| 12 | ದಾವಣಗೆರೆ | 166 |
| 13 | ಧಾರವಾಡ | 140 |
| 14 | ಗದಗ | 85 |
| 15 | ಹಾಸನ | 215 |
| 16 | ಹಾವೇರಿ | 158 |
| 17 | ಕಲಬುರಗಿ | 164 |
| 18 | ಕೊಡಗು | 78 |
| 19 | ಕೋಲಾರ | 120 |
| 20 | ಕೊಪ್ಪಳ | 96 |
| 21 | ಮಂಡ್ಯ | 186 |
| 22 | ಮೈಸೂರು | 193 |
| 23 | ರಾಯಚೂರು | 117 |
| 24 | ರಾಮನಗರ | 92 |
| 25 | ಶಿವಮೊಗ್ಗ | 211 |
| 26 | ತುಮಕೂರು | 236 |
| 27 | ಉಡುಪಿ | 132 |
| 28 | ಉತ್ತರ ಕನ್ನಡ | 153 |
| 29 | ವಿಜಯನಗರ | 88 |
| 30 | ವಿಜಯಪುರ | 152 |
| 31 | ಯಾದಗಿರಿ | 91 |
| **ಒಟ್ಟು** | | **4,646** |

## ಅನುಬಂಧ -2

## ಶ್ರೀ ಕಿಶೋರ್ ಕುಮಾರ್ ಪುತ್ತೂರು ರವರ ಪ್ರಶ್ನೆ ಸಂ. LAQ 89 (112)

(ರೂ. ಲಕ್ಷಗಳಲ್ಲಿ)

| ಜಿಲ್ಲೆ | District | ನೋಂದಾಯಿತ ರೈತ ಪ್ರಕರ್ಣಗಳು | ರೈತರ ಪಾಲಿನ ವಿಮಾ ಕಂತು | ವಿಮಾ ಪರಿಹಾರ ಪಡೆದ ರೈತ ಪ್ರಕರ್ಣಗಳ ಸಂಖ್ಯೆ | ವಿಮಾ ಪಾರಿಹಾರ ಮೊತ್ತ (ರೂ. ಲಕ್ಷಗಳಲ್ಲಿ) | ಪಾವತಿಸಲು ಬಾಕಿ ಇರುವ ರೈತ ಪ್ರಕರ್ಣಗಳ ಸಂಖ್ಯೆ | ಪಾವತಿಸಲು ಬಾಕಿ ಇರುವ ವಿಮಾ ಪರಿಹಾರ ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|---|---|---|---|---|
| ಬಾಗಲಕೋಟೆ | Bagalkot | 5302 | 554.14 | 4256 | 6564.56 | 1046 | 1387.44 |
| ಬಳ್ಳಾರಿ | Ballari | 167 | 7.95 | 0 | 0.00 | 167 | 69.76 |
| ಬೆಳಗಾವಿ | Belagavi | 8685 | 833.80 | 8328 | 8340.36 | 215 | 183.08 |
| ಬೆಂಗಳೂರು ಗ್ರಾಮಾಂತರ | Bengaluru Rural | 1055 | 52.13 | 0 | 0.00 | 1055 | 727.79 |
| ಬೆಂಗಳೂರು ನಗರ | Bengaluru Urban | 30 | 1.35 | 18 | 2.40 | 12 | 10.53 |
| ಬೀದರ್ | Bidar | 280 | 8.43 | 0 | 0.00 | 280 | 56.49 |
| ಚಾಮರಾಜನಗರ | ChamarajNagar | 12 | 0.32 | 0 | 0.00 | 12 | 1.34 |
| ಚಿಕ್ಕಬಳ್ಳಾಪುರ | Chikkaballapur | 3336 | 171.49 | 3205 | 1457.88 | 131 | 41.92 |
| ಚಿಕ್ಕಮಗಳೂರು | Chikkamagaluru | 70506 | 1766.40 | 30861 | 3893.22 | 39643 | 5592.03 |
| ಚಿತ್ರದುರ್ಗ | Chitradurga | 5780 | 296.04 | 0 | 0.00 | 5780 | 1512.75 |
| ದಕ್ಷಿಣ ಕನ್ನಡ | DakshinaKannada | 332750 | 4036.98 | 288097 | 23490.92 | 44653 | 4662.09 |
| ದಾವಣಗೆರೆ | Davangere | 18687 | 805.71 | 18687 | 4127.16 | 0 | 0.00 |
| ಧಾರವಾಡ | Dharwad | 10267 | 354.88 | 10091 | 4644.39 | 0 | 23.91 |
| ಗದಗ | Gadag | 71 | 4.84 | 71 | 52.02 | 0 | 0.00 |
| ಹಾಸನ | Hasan | 10647 | 210.70 | 10647 | 1497.16 | 0 | 0.00 |
| ಹಾವೇರಿ | Haveri | 23595 | 804.38 | 22440 | 5676.03 | 0 | 317.93 |
| ಕಲಬುರಗಿ | Kalaburgi | 313 | 15.84 | 0 | 0.00 | 313 | 98.75 |
| ಕೊಡಗು | Kodagu | 5711 | 99.99 | 0 | 0.00 | 5711 | 409.22 |
| ಕೋಲಾರ | Kolar | 6191 | 136.20 | 6191 | 1270.19 | 0 | 4.33 |
| ಕೊಪ್ಪಳ | Koppal | 1624 | 63.09 | 1162 | 398.02 | 225 | 177.31 |
| ಮಂಡ್ಯ | Mandya | 11 | 0.28 | 0 | 0.00 | 11 | 1.13 |
| ಮೈಸೂರು | Mysuru | 12 | 0.32 | 0 | 0.00 | 12 | 1.66 |
| ರಾಯಚೂರು | Raichur | 176 | 8.38 | 0 | 0.00 | 176 | 93.76 |
| ರಾಮನಗರ | Ramanagara | 9369 | 195.51 | 8872 | 2377.51 | 497 | 2.72 |
| ಶಿವಮೊಗ್ಗ | Shivamogga | 90811 | 2672.56 | 89611 | 11323.54 | 954 | 32.20 |
| ತುಮಕೂರು | Tumakuru | 15150 | 564.58 | 13380 | 1891.22 | 1654 | 18.50 |
| ಉಡುಪಿ | Udupi | 21371 | 318.60 | 21354 | 4232.21 | 17 | 2.30 |
| ಉತ್ತರ ಕನ್ನಡ | UttarKannada | 90245 | 1293.55 | 0 | 0.00 | 90245 | 7413.42 |
| ವಿಜಯನಗರ | VIJAYANAGARA | 641 | 39.17 | 595 | 109.47 | 4 | 11.45 |
| ವಿಜಯಪುರ | Vijayapura | 19104 | 2566.73 | 17226 | 30239.43 | 1878 | 3654.46 |
| ಯಾದಗಿರಿ | YADGIRI | 25 | 1.31 | 8 | 7.76 | 0 | 4.25 |
| **ಒಟ್ಟು** | | **751924** | **17885.62** | **555100** | **111595.45** | **194691** | **26512.52** |

## ಅನುಬಂಧ-3

### ಪ್ರಾಧಿಕಾರಕ್ಕೆ ಸಲ್ಲಿಕೆಯಾದ ದೂರುಗಳು, ಪರಿಹಾರ ಕಂಡುಕೊಳ್ಳಲಾದ ದೂರುಗಳ ಜಿಲ್ಲಾವಾರು ಮಾಹಿತಿ

| ಜಿಲ್ಲೆ | ವರ್ಷ | ಸಲ್ಲಿಕೆಯಾದ ದೂರು (ವಿವರ) | ಪರಿಹಾರ ಕಂಡುಕೊಳ್ಳಲಾದ ದೂರುಗಳು (ವಿವರ) |
|---|---|---|---|
| ಚಿತ್ರದುರ್ಗ | 2022-23 | 1 | 1 |
| | 2023-24 | | |
| | 2024-25 | | |
| | 2025-26 | | |
| ಶಿವಮೊಗ್ಗ | 2022-23 | 26 | 26 |
| | 2023-24 | 7 | 7 |
| | 2024-25 | 3 | 3 |
| | 2025-26 | 6 | 6 |
| ಚಿಕ್ಕಬಳ್ಳಾಪುರ | 2022-23 | 5 | 5 |
| | 2023-24 | 3 | 3 |
| | 2024-25 | | |
| | 2025-26 | | |
| ಉತ್ತರಕನ್ನಡ | 2022-23 | 6 | 6 |
| | 2023-24 | 1 | 1 |
| | 2024-25 | 7 | 7 |
| | 2025-26 | 4 | 4 |
| ಕಲಬುರ್ಗಿ | 2022-23 | | |
| | 2023-24 | | |
| | 2024-25 | 1 | 0 |
| | 2025-26 | | |
| ಬೆಳಗಾವಿ | 2022-23 | | |
| | 2023-24 | | |
| | 2024-25 | | |
| | 2025-26 | 1 | 1 |
| ಗದಗ | 2022-23 | | |
| | 2023-24 | 1 | 1 |
| | 2024-25 | | |
| | 2025-26 | | |
| ಹಾವೇರಿ | 2022-23 | 1725 | 1725 |
| | 2023-24 | 1539 | 564 |
| | 2024-25 | | |
| | 2025-26 | | |
| ಚಿಕ್ಕಮಗಳೂರು | 2022-23 | 5 | 5 |
| | 2023-24 | 6 | 6 |
| | 2024-25 | 7 | 7 |
| | 2025-26 | 15 | 15 |